ಕರ್ನಾಟಕ ಸರ್ಕಾರ
GOVERNMENT OF KARNATAKA

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ

# ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರ



# 2016–17 ಹಾಗೂ 2017–18 ನೇ ಸಾಲಿನ ವಾರ್ಷಿಕ ವರದಿ

(ದಿನಾಂಕ: 21.10.2016 ರಿಂದ 31.03.2018 ರವರೆಗೆ)

ಗ್ರೇಟರ್ ಬೆಂಗಳೂರು–ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರ,
ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಆವರಣ,
ನಂ. 1, ಆಲಿ ಆಸ್ಕರ್ ರಸ್ತೆ, ಬೆಂಗಳೂರು–560 052

E-mail : gbbscpa.tp2018@gmail.com | Website : www.gbbscpa.com

# ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರ

## 2016–17 ಹಾಗೂ 2017–18 ನೇ ಸಾಲಿನ ವಾರ್ಷಿಕ ವರದಿ

**(ದಿನಾಂಕ: 21.10.2016 ರಿಂದ 31.03.2018 ರವರೆಗೆ)**


ಗ್ರೇಟರ್ ಬೆಂಗಳೂರು–ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರ,
ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಆವರಣ,
ನಂ. 1, ಆಲಿ ಆಸ್ಕರ್ ರಸ್ತೆ, ಬೆಂಗಳೂರು–560 052

ಇ–ಮೇಲ್: gbbscpa.tp2018@gmail.com
ಜಾಲತಾಣ: www.gbbscpa.com

## 1. ಪ್ರಸ್ತಾವನೆ:

'ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ' ಯೋಜನಾ ಪ್ರಾಧಿಕಾರವು ರಾಜ್ಯ ಸರ್ಕಾರದ ಆಡಳಿತಕ್ಕೆ ಒಳಪಟ್ಟು ಕಾರ್ಯ ನಿರ್ವಹಿಸುವ ಸ್ವಾಯತ್ತ ಸಂಸ್ಥೆಗಳಲ್ಲಿ ಒಂದಾಗಿದ್ದು, ಈ ಪ್ರಾಧಿಕಾರದ ಕಛೇರಿಯು ನಂ. 1, ಅಲಿ ಆಸ್ಕರ್ ರಸ್ತೆ, ಬೆಂಗಳೂರು ಇಲ್ಲಿ ಕಾರ್ಯನಿರ್ವಹಿಸುತ್ತಿದೆ. ಪ್ರಾಧಿಕಾರದ ಅಧ್ಯಕ್ಷರು ಕಛೇರಿಯ ಮುಖ್ಯಸ್ಥರಾಗಿದ್ದು, ಇವರನ್ನು ರಾಜ್ಯ ಸರ್ಕಾರವು ನೇಮಕ ಮಾಡಿರುತ್ತದೆ. ಮಹಾನಗರ ಯೋಜಕರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಇವರು ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾಗಿದ್ದು ಪ್ರಾಧಿಕಾರದ ಎಲ್ಲಾ ಕಾರ್ಯಚಟುವಟಿಕೆಗಳ ಸಂಬಂಧ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ.


## 2. 'ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ' ಯೋಜನಾ ಪ್ರಾಧಿಕಾರದ ಕಾರ್ಯಾರಂಭದ ಬಗ್ಗೆ:

ಬೆಂಗಳೂರು ಮಹಾನಗರ ಪ್ರದೇಶದ ವ್ಯಾಪ್ತಿಯಲ್ಲಿನ 10 ಯೋಜನಾ ಪ್ರಾಧಿಕಾರಗಳಲ್ಲಿ ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ' ಸ್ಥಳೀಯ ಯೋಜನಾ ಪ್ರದೇಶವು ಒಂದಾಗಿರುತ್ತದೆ. ಈ ಮೊದಲು ಸರ್ಕಾರದಿಂದ ಅನುಮೋದಿಸಿದ ರಚನಾ ನಕ್ಷೆಯಂತೆ, APZ-1ರಲ್ಲಿ ಬರುತ್ತಿದ್ದು, ಸದರಿ APZ-1ರ ಪ್ರದೇಶದಲ್ಲಿನ ಬೆಳವಣಿಗೆಗಳನ್ನು ನೇರವಾಗಿ ಬಿಎಂಆರ್‌ಡಿಎ ಕಾಯ್ದೆಯಂತೆ, ಬೆಳವಣಿಗೆಗಳನ್ನು ನಿಯಂತ್ರಿಸಲಾಗುತ್ತಿತ್ತು. ನಂತರದಲ್ಲಿ ಸರ್ಕಾರದಿಂದ ಅನುಮೋದಿತ ರಚನಾ ನಕ್ಷೆಯಂತೆ APZ-1ರ ಪ್ರದೇಶವನ್ನು ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ' ಯೋಜನಾ ಪ್ರದೇಶವಾಗಿ ಘೋಷಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 4(ಎ) (1)ರಂತೆ ಸರ್ಕಾರದಿಂದ ಅಧಿಸೂಚನೆ ಸಂಖ್ಯೆ:ನಅಇ 104 ಬಿಎಂಆರ್ 2014 ದಿನಾಂಕ:03.06.2016ರಂತೆ, ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ' ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಲಾಗಿದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/104/ ಬಿಎಂಆರ್/2014 ದಿನಾಂಕ: 21.10.2016ರ ಅಧಿಸೂಚನೆಯಲ್ಲಿ ಕಲಂ 4(ಸಿ)(1)ರ ಅಡಿಯಲ್ಲಿ ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿರುತ್ತದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ/104/ಬಿಎಂಆರ್/2014, ದಿನಾಂಕ: 21.10.2016ರಲ್ಲಿ ಕೆ.ಟಿ.ಸಿ.ಪಿ. ಕಾಯ್ದೆ, 1961ರ ಕಲಂ 4(ಸಿ)(3)(i)ರನ್ವಯ ಅಧ್ಯಕ್ಷರು ಮತ್ತು 4(ಸಿ)(3)(ii) ರನ್ವಯ ಸದಸ್ಯ ಕಾರ್ಯದರ್ಶಿಗಳನ್ನು, ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ/200/ಬಿಎಂಆರ್/2016, ದಿನಾಂಕ: 07.02.2017ರಲ್ಲಿ ಕೆ.ಟಿ.ಸಿ.ಪಿ. ಕಾಯ್ದೆ, 1961ರ 4(ಸಿ)(3)ರನ್ವಯ ಪದನಿಮಿತ್ತ ಸದಸ್ಯರನ್ನು ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ/200/ಬಿಎಂಆರ್/2016, ದಿನಾಂಕ: 07.02.2017ರಲ್ಲಿ ಕೆ.ಟಿ.ಸಿ.ಪಿ. ಕಾಯ್ದೆ, 1961ರ 4(ಎಫ್) ರನ್ವಯ ಸಲಹೆ ಮತ್ತು ಸಹಾಯಕ್ಕಾಗಿ ವಿಶೇಷ ಆಹ್ವಾನಿತರನ್ನು ನೇಮಕ ಮಾಡಲಾಗಿರುತ್ತದೆ.

| | | |
|---|---|---|
| 1. | ಮಹಾನಗರ ಆಯುಕ್ತರು, ಬಿಎಂಆರ್‌ಡಿಎ | ಅಧ್ಯಕ್ಷರು |
| 2. | ಮಹಾನಗರ ಯೋಜಕರು, ಬಿಎಂಆರ್‌ಡಿಎ | ಸದಸ್ಯ–ಕಾರ್ಯದರ್ಶಿಗಳು |
| 3. | ಸ್ಥಳೀಯ ಯೋಜನಾ ಪ್ರದೇಶದ ಕಾರ್ಯವ್ಯಾಪ್ತಿಯಲ್ಲಿನ ರಾಮನಗರ ಜಿಲ್ಲೆಯ ಜಿಲ್ಲಾಧಿಕಾರಿಗಳು. | ಸದಸ್ಯರು |
| 4. | ಸ್ಥಳೀಯ ಯೋಜನಾ ಪ್ರದೇಶದ ಕಾರ್ಯವ್ಯಾಪ್ತಿಯಲ್ಲಿನ ರಾಮನಗರ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು. | ಸದಸ್ಯರು |
| 5. | ಸ್ಥಳೀಯ ಯೋಜನಾ ಪ್ರದೇಶದ ಕಾರ್ಯವ್ಯಾಪ್ತಿಯಲ್ಲಿನ ರಾಮನಗರ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು. | ಸದಸ್ಯರು |
| 6. | ಸ್ಥಳೀಯ ಯೋಜನಾ ಪ್ರದೇಶದ ಕಾರ್ಯವ್ಯಾಪ್ತಿಯಲ್ಲಿನ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು. | ವಿಶೇಷ ಆಹ್ವಾನಿತರು |
| 7. | ಸ್ಥಳೀಯ ಯೋಜನಾ ಪ್ರದೇಶದ ಕಾರ್ಯವ್ಯಾಪ್ತಿಯಲ್ಲಿನ ನಗರ ನೀರು ಸರಬರಾಜು ಮಂಡಳಿಯ ಕಾರ್ಯಪಾಲಕ ಅಭಿಯಂತರರು. | ವಿಶೇಷ ಆಹ್ವಾನಿತರು |
| 8. | ಸ್ಥಳೀಯ ಯೋಜನಾ ಪ್ರದೇಶದ ಕಾರ್ಯವ್ಯಾಪ್ತಿಯಲ್ಲಿನ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಕಾರ್ಯಪಾಲಕ ಅಭಿಯಂತರರು. | ವಿಶೇಷ ಆಹ್ವಾನಿತರು |

**ಯೋಜನಾ ಪ್ರಾಧಿಕಾರದ ಎಲ್ಲೆಯ ನಕ್ಷೆ**



3. ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರದ ಸಂಕ್ಷಿಪ್ತ ವರದಿ:

ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ ಸ್ಥಳೀಯ ಯೋಜನಾ ಪ್ರದೇಶವು ರಾಮನಗರ ಜಿಲ್ಲೆಯ ವ್ಯಾಪ್ತಿಯಲ್ಲಿದ್ದು, ಸದರಿ ಯೋಜನಾ ಪ್ರದೇಶದ ಉತ್ತರಕ್ಕೆ ಮಾಗಡಿ ಯೋಜನಾ ಪ್ರಾಧಿಕಾರದ ವ್ಯಾಪ್ತಿ ಮತ್ತು ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ ವ್ಯಾಪ್ತಿ ಬರುತ್ತದೆ. ದಕ್ಷಿಣಕ್ಕೆ ಕನಕಪುರ ಯೋಜನಾ ಪ್ರಾಧಿಕಾರ ವ್ಯಾಪ್ತಿ ಬರುತ್ತದೆ. ಪೂರ್ವಕ್ಕೆ ಕನಕಪುರ ಯೋಜನಾ ಪ್ರಾಧಿಕಾರ ಹಾಗೂ ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ ವ್ಯಾಪ್ತಿ ಬರುತ್ತದೆ. ಪಶ್ಚಿಮಕ್ಕೆ ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರ ವ್ಯಾಪ್ತಿ ಬರುತ್ತದೆ. ಗ್ರೇಟರ್ ಬೆಂಗಳೂರು–ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರದೇಶದಲ್ಲಿ ಮುಖ್ಯವಾಗಿ ರಾಷ್ಟ್ರೀಯ ಹೆದ್ದಾರಿ – 275 ಹಾದುಹೋಗುತ್ತದೆ.

'ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ' ಯೋಜನಾ ಪ್ರದೇಶವು 01ಪುರಸಭೆ ಹಾಗೂ ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿಯ 26 ಗ್ರಾಮಗಳು, ಕೈಲಾಂಚ ಹೋಬಳಿಯ 03 ಗ್ರಾಮಗಳು, ರಾಮನಗರ–ಕಸಬಾ ಹೋಬಳಿಯ 08 ಗ್ರಾಮಗಳು, ಕನಕಪುರ ತಾಲ್ಲೂಕು, ಹಾರೋಹಳ್ಳಿ ಹೋಬಳಿಯ ವಡೇರಹಳ್ಳಿ ಗ್ರಾಮದ ಭಾಗಶಃ ಪ್ರದೇಶ ಸೇರಿ ಒಟ್ಟು 38 ಗ್ರಾಮಗಳನ್ನು ಒಳಗೊಂಡಿದ್ದು, 38 ಗ್ರಾಮಗಳ ಒಟ್ಟು ವಿಸ್ತೀರ್ಣವು 141.54ಚ.ಕಿ.ಮೀ. ಇರುತ್ತದೆ. ಇದರ ಜನಸಂಖ್ಯೆಯು 2011ರ ಜನಗಣತಿಯಂತೆ, 54,770 ಇರುತ್ತದೆ.

4. ಪ್ರಾಧಿಕಾರದ ಕಾರ್ಯಚಟುವಟಿಕೆಗಳು:

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಅಡಿಯಲ್ಲಿ ಗ್ರೇಟರ್ ಬೆಂಗಳೂರು–ಬಿಡದಿ ಸ್ಮಾರ್ಟ್ ಸಿಟಿ ಸ್ಥಳೀಯ ಯೋಜನಾ ಪ್ರದೇಶದ ಭೂ ಉಪಯೋಗಗಳ ಯೋಜನಾ ಬದ್ಧ ಬೆಳವಣಿಗೆ ಮತ್ತು ಅಭಿವೃದ್ಧಿ ನಿಯಂತ್ರಣದ ಧ್ಯೆಯೋದ್ದೇಶ ಹೊಂದಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಅಡಿಯಲ್ಲಿ ಈ ಕೆಳಕಂಡ ಕರ್ತವ್ಯಗಳನ್ನು ಹೊಂದಿರುತ್ತದೆ.

i) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯಿದೆ 1961ರ ಕಲಂ (5) ರಿಂದ (8)ರಲ್ಲಿನ ಅವಕಾಶಗಳಂತೆ ಸ್ಥಳೀಯ ಯೋಜನಾ ಪ್ರದೇಶದ ಮೂಲನಕ್ಷೆಯನ್ನೊಳಗೊಂಡಂತೆ ಹಾಲಿ ಭೂ ಉಪಯೋಗ ನಕ್ಷೆಗಳನ್ನು ತಯಾರಿಸುವುದು.

ii) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯಿದೆ 1961ರ ಕಲಂ (9) ರಿಂದ (13)ರಲ್ಲಿನ ಅವಕಾಶಗಳಂತೆ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಯನ್ನು ತಯಾರಿಸಿ, ಸರ್ಕಾರದ ಅನುಮೋದನೆ ಪಡೆದುಕೊಳ್ಳುವುದು.

iii) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯಿದೆ 1961ರ ಕಲಂ (14) ರಿಂದ (18)ರಲ್ಲಿನ ಅವಕಾಶಗಳಂತೆ, ಮಹಾಯೋಜನೆ ಮತ್ತು ವಲಯ ನಿಯಮಾವಳಿಗಳಿಗೆ ಅನುಗುಣವಾಗಿ ಭೂ/ಕಟ್ಟಡ ಅಭಿವೃದ್ಧಿ ಅನುಮತಿ, ಭೂ ಉಪಯೋಗ ಅಭಿಪ್ರಾಯ, ಭೂ ಉಪಯೋಗ ಬದಲಾವಣೆ, ಖಾಸಗಿ ವಸತಿ, ವಸತಿಯೇತರ ವಿನ್ಯಾಸ & ಉಪವಿಭಜನೆ ಅನುಮತಿಗಳನ್ನು ನೀಡುವುದು.

iv) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯಿದೆ 1961ರ ಕಲಂ (26) ರಿಂದ (68)ರ ವರೆಗಿನ ಅವಕಾಶಗಳಂತೆ, ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಯನ್ನು ಜಾರಿಗೊಳಿಸುವ ಸಂಬಂಧ ನಗರ ಯೋಜನೆ ಸ್ಕೀಮ್‌ಗಳನ್ನು ರೂಪಿಸಿ ಕಾರ್ಯಗತಗೊಳಿಸುವುದು.

v) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯಿದೆ 1961ರ ಅವಕಾಶಗಳಂತೆ, ಯೋಜನಾ ಪ್ರಾಧಿಕಾರದ ನಿಧಿಯ ನಿರ್ವಹಣೆ, ಆಯ–ವ್ಯಯ, ಲೆಕ್ಕಪತ್ರ & ಆಡಿಟ್, ವಾರ್ಷಿಕ ವರದಿ ತಯಾರಿಸುವುದು.

vi) ಸ್ಥಳೀಯ ಯೋಜನಾ ಪ್ರದೇಶದಲ್ಲಿ ಯೋಜನಾ ಪ್ರಾಧಿಕಾರದಲ್ಲಿ ಲಭ್ಯವಿರುವ ಹಣದಲ್ಲಿ ಸರ್ಕಾರದ ಆದೇಶದ ಅನುಸಾರ ಕೆರೆ ಅಭಿವೃದ್ಧಿ ಕಾರ್ಯಗಳು ಮತ್ತು ಇತರೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದು.

vii) ಸರ್ಕಾರದಿಂದ ವಹಿಸಲ್ಪಡುವ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು ಅಥವಾ ಯಾವ ಉದ್ದೇಶಕ್ಕೆ ಪ್ರಾಧಿಕಾರವು ರಚಿಸಲ್ಪಟ್ಟಿದೆಯೋ ಆ ಉದ್ದೇಶಗಳನ್ನು ಈಡೇರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

**5. ಕಛೇರಿಯ ಕಾರ್ಯನಿರ್ವಹಣೆ:**

ಪ್ರಾಧಿಕಾರವು ಕೆ.ಟಿ.ಸಿ.ಪಿ. ಕಾಯ್ದೆ 1961ರಂತೆ ಕಾರ್ಯನಿರ್ವಹಿಸುತ್ತಿದ್ದು, ಸದರಿ ಕಾಯ್ದೆಯಂತೆ ಯೋಜನಾ ಪ್ರದೇಶಗಳಲ್ಲಿ ಬರುವ ಜಾಗಗಳಿಗೆ ನಿಯಮಗಳ ಪ್ರಕಾರ ಅಂದರೆ ಭೂ ಪರಿವರ್ತನೆಗಾಗಿ ತಾಂತ್ರಿಕ ಅಭಿಪ್ರಾಯ ನೀಡುವುದು, ವಿನ್ಯಾಸ ಅನುಮೋದನೆ ಮತ್ತು ಕಟ್ಟಡವನ್ನು ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲಾಗುತ್ತದೆ. ಇದಲ್ಲದೇ ಅನಧಿಕೃತ ಅಭಿವೃದ್ಧಿಗಳನ್ನು ಸಹ ನಿಯಂತ್ರಿಸಲು ಕ್ರಮಕೈಗೊಳ್ಳಲಾಗಿರುತ್ತದೆ.

**6. ಪ್ರಾಧಿಕಾರದ ಕಾರ್ಯವಿಧಾನ ಮತ್ತು ಕರ್ತವ್ಯಗಳು:**

| ಕ್ರ. ಸಂ. | ಪದನಾಮ | ಕರ್ತವ್ಯಗಳು |
|---|---|---|
| 1. | ಅಧ್ಯಕ್ಷರು | 1. ಕೆ.ಟಿ.ಸಿ.ಪಿ. ಕಾಯ್ದೆ 1961 ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮ 1965ರನ್ವಯ ಪ್ರಾಧಿಕಾರದ ಸಭೆಯನ್ನು ನಡೆಸುವುದು.<br>2. ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಗಳು 1965ರ:<br>**(i) ನಿಯಮ–12(2)ರನ್ವಯ** : ಪ್ರಾಧಿಕಾರದ ಸಭೆಗಳ ಆದೇಶಗಳನ್ನು ಕಾಯ್ದಿರಿಸಲು ಬೇಕಾಗುವ ಎಲ್ಲಾ ಅಧಿಕಾರವನ್ನು ಹೊಂದಿರುತ್ತಾರೆ.<br>**(ii) ನಿಯಮ–12(3)ರನ್ವಯ :** ಸಭೆಯ ಯಾವುದೇ ಇತರೆ ಸದಸ್ಯರ ವರ್ತನೆಯಿಂದ ಸಭೆಯಲ್ಲಿ ಅವ್ಯವಸ್ಥೆ ಏರ್ಪಟ್ಟಾಗ, ಅಂತಹ ಸದಸ್ಯರನ್ನು ಸಭೆಯಿಂದ ನಿರ್ಗಮಿಸುವಂತೆ ಕ್ರಮಕೈಗೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ.<br>**(iii) ನಿಯಮ–12(4)ರನ್ವಯ :** ಸಭೆಗಳಲ್ಲಿ ಅನಾನುಕೂಲತೆ ಏರ್ಪಟ್ಟಾಗ ತತ್ಕಾಲಕ್ಕೆ ಸಭೆ ಸ್ಥಗಿತಗೊಳಿಸಿ ಸಭೆಗಳನ್ನು ಮುಂದೂಡಲು ಅಧಿಕಾರವುಳ್ಳವರಾಗಿರುತ್ತಾರೆ. |
| 2. | ಸದಸ್ಯ–ಕಾರ್ಯದರ್ಶಿ | ಕೆ.ಟಿ.ಸಿ.ಪಿ. ಕಾಯ್ದೆ 1961 ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮ 1965ರನ್ವಯ, ಹಾಗೂ ಸರ್ಕಾರದ ಆದೇಶದಂತೆ ಕಾರ್ಯನಿರ್ವಹಿಸುವುದು. |
| 3. | ಸದಸ್ಯರು | ಪ್ರಾಧಿಕಾರದ ಸಭೆಯಲ್ಲಿ ಭಾಗವಹಿಸಿ ನಿರ್ಣಯ ಕೈಗೊಳ್ಳುವುದು. |

7. **ತೀರ್ಮಾನ ಕೈಗೊಳ್ಳುವುದರಲ್ಲಿ ನಿಯಂತ್ರಣ ಮತ್ತು ಜವಾಬ್ದಾರಿಯು ಸೇರಿದಂತೆ ಅನುಸರಿಸಬೇಕಾದ ಕಾರ್ಯವಿಧಾನ:**

ಪ್ರಾಧಿಕಾರದಲ್ಲಿ ಸಾರ್ವಜನಿಕರಿಂದ ಮತ್ತು ಇತರೆ ಕಛೇರಿಗಳಿಂದ ಸ್ವೀಕೃತವಾದ ಪ್ರಸ್ತಾವನೆಗಳನ್ನು ಸದಸ್ಯ ಕಾರ್ಯದರ್ಶಿಯವರು ನಿಯಮಗಳನ್ವಯ ಪರಿಶೀಲಿಸಿ ಅವರಿಗೆ ಇರುವ ಅಧಿಕಾರ ವ್ಯಾಪ್ತಿಯ ಅನ್ವಯ ಅನುಮೋದನೆ ನೀಡಲು ಕ್ರಮಕೈಗೊಳ್ಳುತ್ತಾರೆ. ಇತರೆ ಸಂದರ್ಭಗಳಲ್ಲಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿ ಪ್ರಸ್ತಾವನೆಗಳ ವಿಲೇವಾರಿಗೆ ಕ್ರಮಕೈಗೊಳ್ಳಲಾಗುತ್ತಿದೆ. ದಿನಾಂಕ: 21.10.2016 ರಿಂದ 31.3.2018ರ ಅವಧಿಯಲ್ಲಿ 07 ಸಭೆಗಳನ್ನು ನಡೆಸಲಾಗಿದ್ದು, ಸಭೆಯ ತೀರ್ಮಾನದಂತೆ ಕ್ರಮಕೈಗೊಳ್ಳಲಾಗಿದೆ.

8. **ಕರ್ತವ್ಯ ನಿರ್ವಹಣೆಗಾಗಿ ನಿಗಧಿಪಡಿಸಲಾದ ಸೂತ್ರಗಳು:**

ಪ್ರಾಧಿಕಾರದ ಕಾರ್ಯನಿರ್ವಹಣೆಯು ವಿವಿಧ ಕಾಯ್ದೆಗಳಲ್ಲಿ ನೀಡಿರುವ ಸೂಚನೆಗಳಂತೆ ಸರ್ಕಾರದಿಂದ ಜಾರಿಗೊಳಿಸಲಾದ ಆದೇಶಗಳು, ಸುತ್ತೋಲೆಗಳು ಮತ್ತು ವಿವಿಧ ಹಂತಗಳಲ್ಲಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ಅನುಸರಿಸಿ ಕರ್ತವ್ಯಗಳನ್ನು ನಿರ್ವಹಿಸಲಾಗುತ್ತದೆ.

9. **ಪ್ರಾಧಿಕಾರದಲ್ಲಿ ಪಾಲಿಸುವ ಕಾಯ್ದೆಗಳು / ನಿಯಮಗಳ / ಸೂಚನೆಗಳ ಕೈಪಿಡಿ ಮತ್ತು ದಾಖಲಾತಿಗಳ ವಿವರಗಳು:**

1. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961
2. ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಗಳು 1965
3. ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಕಾಯ್ದೆ, 1985
4. ಕರ್ನಾಟಕ ಮುನಿಸಿಪಾಲಿಟಿಗಳ ಕಾಯ್ದೆ, 1964
5. ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1957
6. ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ, 1956
7. ಕರ್ನಾಟಕ ಹೆದ್ದಾರಿಗಳ ನಿಯಮ, 1965
8. SAP-BUB-APZ-1ರ ಕರಡು ಮಧ್ಯಂತರ ಮಹಾಯೋಜನೆ – 2031ರ ವರದಿ ಮತ್ತು ವಲಯ ನಿಯಮಾವಳಿಗಳು

10. **ಪ್ರಾಧಿಕಾರದ ಕಛೇರಿಯ ಅಧೀನದಲ್ಲಿ ಲಭ್ಯವಿರುವ ದಾಸ್ತಾವೇಜುಗಳು:**

1. SAP-BUB-APZ-1ರ ಕರಡು ಮಧ್ಯಂತರ ಮಹಾಯೋಜನೆ ಹಾಗೂ ವಲಯ ನಿಯಮಾವಳಿಗಳು;
2. ಅನುಮೋದಿತ ವಸತಿ ವಿನ್ಯಾಸ ನಕ್ಷೆಗಳು;
3. ಕೃಷಿ ಜಮೀನನ್ನು ವ್ಯವಸಾಯೇತರ ಉದ್ದೇಶಕ್ಕಾಗಿ ಭೂಪರಿವರ್ತಿಸಲು ಕಂದಾಯ ಇಲಾಖೆಗೆ ಅಭಿಪ್ರಾಯ ನೀಡಿದ ಕಡತಗಳು
4. ಪ್ರಾರಂಭಿಕ ಪ್ರಮಾಣ ಪತ್ರ ಹಾಗೂ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಅಭಿಪ್ರಾಯ ನೀಡಿದ ಕಡತಗಳು;
5. ಆದಾಯ ಮತ್ತು ವೆಚ್ಚಗಳ ನಗದು ವಹಿ;
6. ದಾಸ್ತಾನು ಪುಸ್ತಕ.
7. ಆಡಳಿತಾತ್ಮಾಕ ಕಡತಗಳು.
8. ಉದ್ಯಾನವನ ಮತ್ತು ನಾಗರೀಕ ಸೌಲಭ್ಯ ವಹಿ.
9. ಇತರೆ ಕಡತಗಳು.

11. ಮಾಹಿತಿ ಹಕ್ಕು ಅಧಿನಿಯಮ 2005ರ ಅಡಿಯಲ್ಲಿ ಪ್ರಾಧಿಕಾರದಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು:

| | | |
|---|---|---|
| 1. | ಪ್ರಥಮ ಮೇಲ್ಮನವಿ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿಗಳು |
| 2. | ಸಾರ್ವಜನಿಕ ಮಾಹಿತಿ ಅಧಿಕಾರಿ | ನಗರ ಮತ್ತು ಗ್ರಾಮಾಂತರ ಯೋಜನಾ ಉಪನಿರ್ದೇಶಕರು |

ಮಾಹಿತಿ ಹಕ್ಕು ಅಧಿನಿಯಮದಡಿ ಪ್ರಸಕ್ತ ವರ್ಷದಲ್ಲಿ 07 ಅರ್ಜಿಗಳನ್ನು ಸ್ವೀಕರಿಸಿದ್ದು, 07 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ.

**12. ಸಾರ್ವಜನಿಕ ಮಾಹಿತಿಗಾಗಿ ಸೌಲಭ್ಯಗಳು:**

a. ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರದ ಕಛೇರಿಯಲ್ಲಿ ಸಾರ್ವಜನಿಕರು ಮಾಹಿತಿಗಳನ್ನು ಪಡೆಯುವ ಅವಕಾಶಗಳನ್ನು ಕಲ್ಪಿಸಿದೆ. ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರಕ್ಕೆ ಸಂಬಂಧಿಸಿದ ಪ್ರಮುಖ ವಿಷಯಗಳನ್ನು ಕುರಿತಂತೆ ಪ್ರಕಟಣೆಗಳನ್ನು ಹಾಗೂ ಮಾಹಿತಿಗಳನ್ನು ಸೂಚನಾ ಫಲಕದಲ್ಲಿ ಸಾರ್ವಜನಿಕ ಗಮನಕ್ಕೆ ತರಲಾಗುತ್ತಿದೆ. ನಾಗರೀಕ ಸನ್ನದು ಪ್ರಕಟಿಸಲಾಗಿದೆ.

**b. ಅಂತರ್ಜಾಲ:**

ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರದ ಅಂತರ್ಜಾಲ (Website) www.gbbscpa.in ರಲ್ಲಿ ಲಭ್ಯವಿರುತ್ತದೆ. ಇದರಲ್ಲಿ ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರದ ಚಟುವಟಿಕೆಗಳ ಬಗ್ಗೆಯ ಮಾಹಿತಿಗಳು ಮತ್ತು ವಿವರಗಳು ಪಾರದರ್ಶಕವಾಗಿ ಸಿಗುವಂತೆ ಮಾಡಲಾಗಿದೆ. ಅನುಮೋದನೆಯಾಗಿರುವ ಬಹುನಿವೇಶನಗಳ ವಸತಿ ವಿನ್ಯಾಸಗಳ ಬಗ್ಗೆ ಮಾಹಿತಿ ಲಭ್ಯವಿರುತ್ತದೆ. ಸರ್ಕಾರದಿಂದ ಅನುಮೋದನೆಯಾಗಿರುವ 'ವಿಶೇಷ ಪ್ರದೇಶ ಯೋಜನೆ–ಬಿಡದಿ ನಗರೀಕರಣ ಘಟಕ–ಯೋಜನಾ ವಲಯ–1' (SAP-BUB-APZ-1)ರ ಕರಡು ಮಧ್ಯಂತರ ಮಹಾಯೋಜನೆ ನಕ್ಷೆ ಮತ್ತು ವಲಯನಿಯಮಾವಳಿಗಳನ್ನು ಪ್ರಕಟಿಸಲಾಗಿದೆ.

**13. ಪ್ರಾಧಿಕಾರದ 2017–18ನೇ ಸಾಲಿನ ಕಾರ್ಯಚಟುವಟಿಕೆಗಳು:**

i. **ಭೂ ಪರಿವರ್ತನೆ:** ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಬರುವ ಜಮೀನುಗಳ ಸಂಬಂಧ ಭೂ ಪರಿವರ್ತನೆಗಾಗಿ ತಾಂತ್ರಿಕ ಅಭಿಪ್ರಾಯ ನೀಡಲು, ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆಗಳನ್ನು ಸ್ವೀಕರಿಸಲಾಗುತ್ತಿದ್ದು, ಸದರಿ ಪ್ರಕರಣಗಳನ್ನು ಸರ್ಕಾರದಿಂದ ಅನುಮೋದಿಸಿದ 'ವಿಶೇಷ ಪ್ರದೇಶ ಯೋಜನೆ–ಬಿಡದಿ ನಗರೀಕರಣ ಘಟಕ–ಯೋಜನಾ ವಲಯ–1' (SAP-BUB-APZ-1)ರ ಕರಡು ಮಧ್ಯಂತರ ಮಹಾಯೋಜನೆಯನ್ವಯ ನಿರ್ದಿಷ್ಟ ಉದ್ದೇಶಿತ ಭೂ ಉಪಯೋಗದ ಬಗ್ಗೆ (earmarked) ಹಾಗೂ ವಲಯನಿಯಮಗಳಂತೆ ಭೂ ಪರಿವರ್ತನೆಗೆ ಅಭಿಪ್ರಾಯವನ್ನು ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗುತ್ತಿದೆ. ಪ್ರಸ್ತುತ ಸಾಲಿನಲ್ಲಿ ಕಂದಾಯ ಇಲಾಖೆಯಿಂದ ಈ ಪ್ರಾಧಿಕಾರಕ್ಕೆ ವ್ಯವಸಾಯ ಜಮೀನುಗಳನ್ನು ವ್ಯವಸಾಯೇತರ ಉದ್ದೇಶಗಳಿಗೆ ಭೂ ಪರಿವರ್ತನೆಗೊಳಿಸುವ ವಿಚಾರಗಳಿಗೆ ಅನುಮತಿಗಾಗಿ ಪ್ರಸ್ತಾವನೆಗಳನ್ನು ಕಳುಹಿಸಲಾಗುತ್ತಿದೆ. ಈ ಸಂಬಂಧ ಒಟ್ಟು 45 ಪ್ರಕರಣಗಳನ್ನು ಸ್ವೀಕರಿಸಿದ್ದು, 01 ಪ್ರಕರಣದಲ್ಲಿ ದಾಖಲಾತಿಗಳನ್ನು ಸಲ್ಲಿಸುವಂತೆ ಕೋರಲಾಗಿದೆ. 31 ಪ್ರಕರಣಗಳನ್ನು ಭೂ ಪರಿವರ್ತನೆಗೆ ಶಿಫಾರಸ್ಸು ಮಾಡಲಾಗಿದ್ದು, ಉಳಿದ 13 ಪ್ರಕರಣಗಳನ್ನು ತಿರಸ್ಕರಿಸಲಾಗಿದೆ.

**ii. ವಿನ್ಯಾಸ ಅನುಮೋದನೆ:**

1) ದಿನಾಂಕ: 10.09.2015ರ ಪೂರ್ವದಲ್ಲಿ ಅನುಮೋದನೆ ನೀಡಲಾದ ವಿನ್ಯಾಸಗಳಿಗೆ ಅನುಸರಿಸಲಾಗುವ ಕ್ರಮ:–

ಜಿಲ್ಲಾಧಿಕಾರಿಗಳಿಂದ ಭೂ ಪರಿವರ್ತನೆ ಆದೇಶವನ್ನು ಪಡೆದು ಅರ್ಜಿದಾರರು ವಿನ್ಯಾಸ ಅನುಮೋದನೆ ಹಾಗೂ ನಿವೇಶನಗಳ ಬಿಡುಗಡೆಗಾಗಿ ಅರ್ಜಿ ಸಲ್ಲಿಸುತ್ತಾರೆ. ನಂತರ ಸದರಿ ಪ್ರಕರಣವನ್ನು ತಾಂತ್ರಿಕವಾಗಿ ಪರಿಶೀಲಿಸಿ ದಾಖಲೆ ಹಾಗೂ ವಿನ್ಯಾಸ ನಕ್ಷೆಗಳು ವಲಯ ನಿಯಮಾವಳಿಗನುಗುಣವಾಗಿದ್ದಲ್ಲಿ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಕೆ.ಟಿ.ಸಿ.ಪಿ. ಕಾಯ್ದೆ 1961ರ ಸೆಕ್ಷನ್ 17ರಂತೆ ವಿನ್ಯಾಸ ಅನುಮೋದನೆ ನೀಡಲಾಗುವುದು. ನಂತರ 10ಎಕರೆ ವಿಸ್ತೀರ್ಣಕ್ಕೆ ಮೀರಿದ ವಿನ್ಯಾಸಗಳಿಗೆ KSPCB ಯಿಂದ ನಿರಾಕ್ಷೇಪಣಾ ಪತ್ರ ಪಡೆದು ಶೇ.40ರಷ್ಟು ನಿವೇಶನಗಳನ್ನು ನೋಂದಣಿಗಾಗಿ ಬಿಡುಗಡೆ ಮಾಡಲಾಗುತ್ತಿದೆ.

ಅರ್ಜಿದಾರರು ಅನುಮೋದಿತ ವಿನ್ಯಾಸದಲ್ಲಿನ ಅಭಿವೃದ್ಧಿ ಕಾಮಗಾರಿಗಳಾದ ರಸ್ತೆ ಕಾಮಗಾರಿ, ಸಿ.ಡಿ. ವರ್ಕ್ಸ್ ಹಾಗೂ ಒಳಚರಂಡಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರ, ಎರಡನೇ ಹಂತದಲ್ಲಿ ಶೇ.30ರಷ್ಟು ನಿವೇಶನಗಳ ಬಿಡುಗಡೆಗೆ ಅರ್ಜಿ ಸಲ್ಲಿಸುತ್ತಾರೆ. ತದನಂತರ ಸ್ಥಳ ಪರಿಶೀಲನೆ ಕೈಗೊಂಡು ನಿಗಧಿತ ಕಾಮಗಾರಿಗಳನ್ನು ಪೂರ್ಣಗೊಳಿ ಸಿರುವ ಬಗ್ಗೆ ಖಚಿತಪಡಿಸಿಕೊಂಡು ಎರಡನೇ ಹಂತದ ಶೇ.30ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗುತ್ತಿತ್ತು.

ಅರ್ಜಿದಾರರು ಅನುಮೋದಿತ ವಿನ್ಯಾಸದಲ್ಲಿನ ಎಲ್ಲಾ ಅಭಿವೃದ್ಧಿ ಕಾಮಗಾರಿಗಳಾದ ರಸ್ತೆ ಕಾಮಗಾರಿ, ಉದ್ಯಾನವನ ಅಭಿವೃದ್ಧಿ, ಒಳಚರಂಡಿ, ನೀರು ಸರಬರಾಜು, ಎಸ್.ಟಿ.ಪಿ. ಪ್ಲಾಂಟ್ ನಿರ್ಮಾಣ, ಕಾಮಗಾರಿಗಳನ್ನು ಪೂರ್ಣಗೊಳಿಸಿ ಉಳಿಕೆ ಶೇ.30ರಷ್ಟು ನಿವೇಶನಗಳನ್ನು ಬಿಡುಗಡೆಗೆ ಅರ್ಜಿ ಸಲ್ಲಿಸಿದ ನಂತರ, ಸ್ಥಳ ಪರಿಶೀಲನೆ ಕೈಗೊಂಡು ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ KSPCB, BESCOM, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ತೋಟಗಾರಿಕೆ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರ ಪಡೆದು ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ಖಚಿತಪಡಿಸಿಕೊಂಡು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ, ನಿವೇಶನಗಳನ್ನು ಬಿಡುಗಡೆ ಮಾಡಲಾಗುತ್ತಿತ್ತು.

**2) ದಿನಾಂಕ: 10.09.2015ರ ನಂತರ ಅನುಮೋದನೆ ಕೋರಿ ಬರುವ ವಿನ್ಯಾಸಗಳಿಗೆ ಅನುಸರಿಸಲಾಗುವ ಕ್ರಮ:–**

ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17ಕ್ಕೆ ಸಂವ್ಯಶಾಇ 24 ಶಾಸನ 2015, ದಿನಾಂಕ:10.09.2015ರಲ್ಲಿ ಆದ ತಿದ್ದುಪಡಿಯಂತೆ ಅರ್ಜಿದಾರರು ಜಿಲ್ಲಾಧಿಕಾರಿಗಳಿಂದ ನೀಡಿರುವ ಭೂ ಪರಿವರ್ತನಾ ಆದೇಶ ಮತ್ತು ಜಮೀನಿಗೆ ಸಂಬಂಧಿಸಿದಂತೆ ಕ್ರಯಪತ್ರ, ಸರ್ವೇ ಸ್ಕೆಚ್ ಇತ್ಯಾದಿ ದಾಖಲೆಗಳನ್ನು ಸಲ್ಲಿಸಿದಲ್ಲಿ ಪ್ರಸ್ತಾವನೆಯನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ, ಸಭೆಯಲ್ಲಿ ತೀರ್ಮಾನಿಸಿದಂತೆ ವಿನ್ಯಾಸ ನಕ್ಷೆಯನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಕರಡು ವಸತಿ ವಿನ್ಯಾಸ ನಕ್ಷೆಗಳಿಗೆ ಅನುಮೋದನೆ ನೀಡಲಾಗುತ್ತಿದೆ.

ಅರ್ಜಿದಾರರು ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಪೂರ್ಣಗೊಳಿಸಿ, ವಿನ್ಯಾಸದಲ್ಲಿನ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳಾದ KSPCB, BESCOM, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರ ಪಡೆದು ವಿನ್ಯಾಸದಲ್ಲಿನ ಎಲ್ಲಾ ಶೇ.100ರಷ್ಟು ನಿವೇಶನಗಳನ್ನು ನೊಂದಣಿಗೆ ಬಿಡುಗಡೆ ಮಾಡಲು ಕೋರಿ ಅರ್ಜಿ ಸಲ್ಲಿಸಿದ ನಂತರ, ಸ್ಥಳ ಪರಿಶೀಲನೆ

ಕೈಗೊಂಡು ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಖಚಿತಪಡಿಸಿಕೊಂಡು ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿ, ಸಭೆಯ ತೀರ್ಮಾನದಂತೆ ಅರ್ಜಿದಾರ/ಅಭಿವೃದ್ಧಿದಾರರು ಪರಿತ್ಯಾಜನಾ ಪತ್ರದ ಮೂಲಕ ರಸ್ತೆ ಮತ್ತು ಉದ್ಯಾನವನ ಪ್ರದೇಶವನ್ನು ಸಂಬಂಧಿಸಿದ ಸ್ಥಳೀಯ ಸಂಸ್ಥೆಗೆ ಹಾಗೂ ಸಾರ್ವಜನಿಕ ನಿವೇಶನವನ್ನು ಯೋಜನಾ ಪ್ರಾಧಿಕಾರಕ್ಕೆ ಹಸ್ತಾಂತರಿಸಿದ ನಂತರ ಅಂತಿಮ ವಸತಿ ವಿನ್ಯಾಸ ನಕ್ಷೆಯನ್ನು ಅನುಮೋದಿಸಿ ವಿನ್ಯಾಸದಲ್ಲಿನ ಎಲ್ಲಾ ಶೇ.100ರಷ್ಟು ನಿವೇಶನಗಳನ್ನು ನೊಂದಣಿಗೆ ಬಿಡುಗಡೆ ಮಾಡಲಾಗುತ್ತಿದೆ.

iii. ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ: ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕಟ್ಟಲ್ಪಡುವ ಕಟ್ಟಡಗಳಿಗೆ ಕೆ.ಟಿ.ಸಿ.ಪಿ. ಕಾಯ್ದೆ 1961ರ ಸೆಕ್ಷನ್ 15ರಂತೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಪ್ರಾಧಿಕಾರದಿಂದ ನೀಡಲಾಗುತ್ತಿದ್ದು, ಪ್ರಸ್ತುತ ವರ್ಷದಲ್ಲಿ 25 ಪ್ರಕರಣಗಳನ್ನು ಸ್ವೀಕರಿಸಿದ್ದು, ಇದರಲ್ಲಿ 12 ಪ್ರಕರಣಗಳಿಗೆ ಕಟ್ಟಡ ನಿರ್ಮಾಣಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗಿದ್ದು, ಉಳಿದ 8 ಪ್ರಕರಣಗಳಿಗೆ ದಾಖಲೆಗಳನ್ನು ಕೋರಲಾಗಿರುತ್ತದೆ. 05 ಪ್ರಕರಣಗಳನ್ನು ತಿರಸ್ಕರಿಸಲಾಗಿರುತ್ತದೆ.

**14. ಪ್ರಾಧಿಕಾರದ ಆರ್ಥಿಕ ಸ್ಥಿತಿಗತಿ:**

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಅಡಿಯಲ್ಲಿ ವಿವಿಧ ಶುಲ್ಕಗಳಿಂದ 2016–17 ಮತ್ತು 2017–18ನೇ ಸಾಲುಗಳಲ್ಲಿ ರೂ.47,07,607.00 ಗಳನ್ನು ಸಂಗ್ರಹಿಸಲಾಗಿದೆ. ಪ್ರಾಧಿಕಾರದ ವತಿಯಿಂದ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ನಿಶ್ಚಿತ ಠೇವಣಿ ಹೂಡಲಾಗಿದೆ.

**15. ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರದ 2018–19ನೇ ಸಾಲಿನಲ್ಲಿ ಹಮ್ಮಿಕೊಳ್ಳಲಾದ ಯೋಜನೆಗಳು / ಕಾರ್ಯಚಟುವಟಿಕೆಗಳು:**

i. ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರಕ್ಕೆ ಮಹಾಯೋಜನೆ ತಯಾರಿಕೆ ಕುರಿತು;

ii. ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 29.12.2015 ರಂದು ಜರುಗಿದ ಪ್ರಾಧಿಕಾರದ 15ನೇ ಸಭೆಯ ವಿಷಯ ಸಂಖ್ಯೆ: 15.5 ರ ನಡವಳಿಕೆಯಲ್ಲಿ ಉದ್ದೇಶಿತ ಸಮಗ್ರ ಉಪನಗರ ಯೋಜನೆ Integrated Township ಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಅಡಿಯಲ್ಲಿ Development-Town Planning Scheme" ಆಧಾರದಲ್ಲಿ ಕಾರ್ಯಗತಗೊಳಿಸಲು ತೀರ್ಮಾನಿಸಲಾಗಿರುತ್ತದೆ.

iii. ಸಭೆಯ ತೀರ್ಮಾನದಂತೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 4(ಎ)(1)ರ ಅಡಿಯಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/104/ಬಿಎಂಆರ್/2014 ದಿನಾಂಕ: 03.06.2016ರಲ್ಲಿ ರಾಮನಗರ ಜಿಲ್ಲೆಯ ಬಿಡದಿ ಮತ್ತು ಸುತ್ತಮುತ್ತಲಿನ 38 ಗ್ರಾಮಗಳನ್ನೊಳಗೊಂಡಂತೆ ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಲಾಗಿರುತ್ತದೆ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/104/ಬಿಎಂಆರ್/2014 ದಿನಾಂಕ: 21.10.2016ರ ಅಧಿಸೂಚನೆಯಲ್ಲಿ ಕಲಂ 4(ಸಿ)(1)ರ ಅಡಿಯಲ್ಲಿ ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿರುತ್ತದೆ.

iv. ದಿನಾಂಕ: 21.10.2016ರ ಅಧಿಸೂಚನೆಯಲ್ಲಿ 'ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ' ಯೋಜನಾ ಪ್ರಾಧಿಕಾರಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 4(ಸಿ)(3)(i) ರನ್ವಯ ಮಹಾನಗರ ಆಯುಕ್ತರು,

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಇವರನ್ನು ಅಧ್ಯಕ್ಷರನ್ನಾಗಿ ಹಾಗೂ ಕಲಂ 4(ಸಿ)(3)(ii) ರನ್ವಯ, ಮಹಾನಗರ ಯೋಜಕರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಇವರನ್ನು ಸದಸ್ಯ ಕಾರ್ಯದರ್ಶಿಗಳನ್ನಾಗಿ ನೇಮಕ ಮಾಡಲಾಗಿರುತ್ತದೆ.

ತ. ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾಯೋಜನೆಯನ್ನು ತಯಾರಿಸುವ ಕುರಿತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಅಡಿಯಲ್ಲಿ 'ಮಹಾಯೋಜನೆ ತಯಾರಿಕೆಯ ಇಚ್ಛೆ' ಯನ್ನು ಹೊಂದಿರುವ ಬಗ್ಗೆ 60ದಿನಗಳ ಅವಧಿಗೆ ಸಾರ್ವಜನಿಕ ಸಲಹೆಗಳನ್ನು ಆಹ್ವಾನಿಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಕಲಂ(10)ರ ಅಡಿಯಲ್ಲಿ 'ಕನ್ನಡ ಪ್ರಭ' ಮತ್ತು 'ದಿ ಡೆಕ್ಕನ್ ಹೆರಾಲ್ಡ್' ದಿನಪತ್ರಿಕೆಗಳಲ್ಲಿ ದಿನಾಂಕ: 17.11.2016ರಂದು ಹಾಗೂ ದಿನಾಂಕ: 08.12.2016ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ.

**ತು. ಸಾರ್ವಜನಿಕ ಉದ್ದೇಶಕ್ಕಾಗಿ ಕಾಯ್ದಿರಿಸಿರುವ ನಿವೇಶನಗಳ ಹಂಚಿಕೆ:**

ಅನುಮೋದನೆಗೊಂಡ ಬಡಾವಣೆಗಳಲ್ಲಿ ಸಾರ್ವಜನಿಕ ಉದ್ದೇಶಕ್ಕಾಗಿ ಕಾಯ್ದಿರಿಸಿದ ನಿವೇಶನಗಳನ್ನು ಹಂಚಲು ಸರ್ಕಾರದ ಮಟ್ಟದಲ್ಲಿ ನಿಯಮಾವಳಿಗಳನ್ನು ಅನುಮೋದಿಸಲಾಗಿದ್ದು, ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ:UDD/27/TTP/2016, ದಿನಾಂಕ:24.05.2017ರಂತೆ ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಾಗರೀಕ ಸೌಕರ್ಯ ನಿವೇಶನ ಹಂಚಿಕೆ ನಿಯಮಗಳು–2016 ಅನ್ನು ಅಧಿಸೂಚಿಸಲಾಗಿರುತ್ತದೆ. ಸದರಿ ನಿಯಮಾವಳಿಯಂತೆ ಮೊದಲನೇ ಮತ್ತು ಎರಡನೇ ಆಧ್ಯತೆ ಇರುವ ಸರ್ಕಾರದ ಸಂಸ್ಥೆಗಳಿಗೆ ಹಂಚುವ ಕ್ರಮ ಕೈಗೊಳ್ಳಲಾಗುತ್ತಿದೆ. ದಿನಪತ್ರಿಕೆಗಳಲ್ಲಿ ಅರ್ಜಿಗಳನ್ನು ಆಹ್ವಾನಿಸಿ, ಸ್ವೀಕೃತವಾದ ಅರ್ಜಿಗಳನ್ನು ಪರಿಶೀಲಿಸಿ, ಸಾರ್ವಜನಿಕ ಉದ್ದೇಶಕ್ಕಾಗಿ ಕಾಯ್ದಿರಿಸಿರುವ ನಿವೇಶನಗಳನ್ನು ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳಿಗೆ ಹಂಚುವ ಕ್ರಮಕೈಗೊಳ್ಳಲಾಗುತ್ತಿದೆ.

**16. ಗ್ರೇಟರ್ ಬೆಂಗಳೂರು–ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರದ ಕಛೇರಿಯ ಸಿಬ್ಬಂದಿ ವಿವರ:**

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಮಹಾನಗರ ಯೋಜಕರು ಈ ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾಗಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯದೆ 1961ರ ಕಲಂ 4(ಹೆಚ್)ರ ರೀತ್ಯ ಯೋಜನಾ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಮತ್ತು ತಾಂತ್ರಿಕ ಅಧಿಕಾರಿಯಾಗಿರುತ್ತಾರೆ.

ಗ್ರೇಟರ್ ಬೆಂಗಳೂರು–ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರಕ್ಕೆ ಪ್ರಸ್ತುತ ಪ್ರತ್ಯೇಕವಾದ ಅಧಿಕಾರಿ/ಸಿಬ್ಬಂದಿ ವರ್ಗ ಇರುವುದಿಲ್ಲ. ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ನಗರ ಯೋಜನಾ ಶಾಖೆಯ ಈ ಕೆಳಕಂಡ ಅಧಿಕಾರಿ/ಸಿಬ್ಬಂದಿ ವರ್ಗದವರು ಯೋಜನಾ ಪ್ರಾಧಿಕಾರದ ಕರ್ತವ್ಯಗಳನ್ನು ನಿರ್ವಹಿಸುತ್ತಿರುತ್ತಾರೆ.

1. ಮಹಾನಗರ ಯೋಜಕರು (ಪ್ರ) ನಗರ ಮತ್ತು ಗ್ರಾಮಾಂತರ ಯೋಜನೆ.
2. ಹೆಚ್ಚುವರಿ ನಿರ್ದೇಕರು, ನಗರ ಮತ್ತು ಗ್ರಾಮಾಂತರ ಯೋಜನೆ.
3. ಜಂಟಿ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ.
4. ಉಪ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ.
5. ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ.
6. ನಗರ ಯೋಜಕರು.

**ದಿನಾಂಕ:21.10.2016 ರಿಂದ ದಿನಾಂಕ:31.03.2018ರ ವರೆಗಿನ ಅವಧಿಯಲ್ಲಿ ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರದಲ್ಲಿ ಸೇವೆ ಸಲ್ಲಿಸಿರುವ ಅಧ್ಯಕ್ಷರು / ಅಧಿಕಾರಿ / ಸಿಬ್ಬಂಧಿಗಳ ವಿವರ.**

| ಕ್ರ. ಸಂ. | ಪದನಾಮ | ಅಧಿಕಾರಿಗಳ ಹೆಸರು | ದಿನಾಂಕ | |
|---|---|---|---|---|
| | | | ರಿಂದ | ರವರೆಗೆ |
| 1. | ಅಧ್ಯಕ್ಷರು | ಶ್ರೀ ಬಿ.ಎಸ್. ಶೇಖರಪ್ಪ | 21.10.2016 | 31.03.2018 |
| 2. | ಸದಸ್ಯ ಕಾರ್ಯದರ್ಶಿ ಹಾಗೂ ಮಹಾನಗರ ಯೋಜಕರು | ಶ್ರೀ ಎನ್.ಕೆ. ತಿಪ್ಪೇಸ್ವಾಮಿ | 21.10.2016 | 31.03.2018 |
| 3. | ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು (ಪ್ರ) | ಶ್ರೀ ಹೆಚ್.ವಿ. ಸಣ್ಣಪ್ಪಯ್ಯ | 21.10.2016 | 07.09.2017 |
| 4. | ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು | ಶ್ರೀ ಎನ್.ವಿ. ಧನಂಜಯ ರೆಡ್ಡಿ | 08.09.2017 | 31.03.2018 |
| 5. | ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು | ಶ್ರೀ ಹೆಚ್.ವಿ. ಸಣ್ಣಪ್ಪಯ್ಯ | 21.10.2016 | 31.03.2018 |
| 6. | ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು | ಶ್ರೀ ಎನ್. ತಿಮ್ಮೇಗೌಡ | 21.10.2016 | 31.03.2018 |
| 7. | ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು | ಶ್ರೀ ಎಂ. ಶಂಕರಪ್ಪ | 27.09.2017 | 31.03.2018 |
| 8. | ನಗರ ಯೋಜಕರು | ಶ್ರೀಮತಿ ಬಿ.ಎನ್. ಶೋಭ | 21.10.2016 | 31.03.2018 |

**17. ಪ್ರಾಧಿಕಾರದ ಆಯವ್ಯಯ 2017–18 (Budget) :**

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ 4(ಸಿ)(1)ರ ಅಡಿಯಲ್ಲಿ ಗ್ರೇಟರ್ ಬೆಂಗಳೂರು–ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರವನ್ನು ದಿನಾಂಕ:21.10.2016ರಂದು ರಚಿಸಲಾಗಿರುವುದರಿಂದ ಪ್ರಾಧಿಕಾರದ 2016–17ನೇ ಸಾಲಿನ ಆಯ–ವ್ಯಯವನ್ನು ತಯಾರಿಸಲು ಸಾಧ್ಯವಾಗಿರುವುದಿಲ್ಲ.

ಕೆ.ಟಿ.ಸಿ.ಪಿ. ಕಾಯ್ದೆ 1961ರ ಸೆಕ್ಷನ್ 68(ಬಿ) ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರದ ನಿಯಮಗಳು 1965 ನಿಯಮ 22ರನ್ವಯ ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರದ 2017–18ನೇ ಸಾಲಿನ ಆಯವ್ಯಯವನ್ನು ಪ್ರಾಧಿಕಾರದ 3ನೇ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದ್ದು, ಸದರಿ ಸಾಲಿನ ಆಯವ್ಯಯವನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿದೆ.

**18. ಕೆರೆಗಳ ಸಂರಕ್ಷಣೆ ಶುಲ್ಕ ವಸೂಲಾತಿ:**

ಸರ್ಕಾರದ ಪತ್ರ ಸಂಖ್ಯೆ:ನಅಇ 90 ಬಿಎಂಆರ್ 2010, ದಿನಾಂಕ:29–09–2010ರಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 18ಎ(1)ರನ್ವಯ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಸಂರಕ್ಷಣೆ (Rejuvenation of Tanks) ಸಲುವಾಗಿ ಖಾಸಗಿ ವಿನ್ಯಾಸ ಮಾಲೀಕರಿಂದ ಪ್ರತಿ ಎಕರೆಗೆ ರೂ.1,00,000/–ರಂತೆ ಹಾಗೂ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ: ನಅಇ 36 ಬೆಮಪ್ರಾ 2016 (ಭಾಗ) ದಿನಾಂಕ:27.01.2017ರಂತೆ ಒಂದು ಚ.ಮೀ.ಗೆ ರೂ.25/–ರಂತೆ ಶುಲ್ಕವನ್ನು ವಸೂಲಿ ಮಾಡಲಾಗಿದೆ. ಪ್ರಸ್ತುತ ಸಾಲಿನಲ್ಲಿ ರೂ.24,16,273.90 ಸಂಗ್ರಹವಾಗಿದೆ.

**19. ಪ್ರಾಧಿಕಾರದ ಆದಾಯ ಮತ್ತು ವೆಚ್ಚಗಳು:**

**2016–17ನೇ ಸಾಲಿಗೆ (21.10.2016 ರಿಂದ 31.03.2017ವರೆಗೆ) ಹಾಗೂ 2017–18ನೇ ಸಾಲಿನ ಆರ್ಥಿಕ ವಹಿವಾಟುಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ:**

| ಕ್ರ. ಸಂ. | ತಿಂಗಳು | ಸ್ವೀಕೃತಿ | ವೆಚ್ಚ |
|---|---|---|---|
| **2016–17ನೇ ಸಾಲಿಗೆ (21.10.2016 ರಿಂದ 31.03.2017ವರೆಗೆ)** | | | |
| 1. | ಅಕ್ಟೋಬರ್ 2016 | – | – |
| 2. | ನವಂಬರ್ 2016 | – | – |
| 3. | ಡಿಸೆಂಬರ್ 2016 | – | – |
| 4. | ಜನವರಿ 2017 | – | – |
| 5. | ಫೆಬ್ರವರಿ 2017 | 1,54,255 | 460 |
| 6. | ಮಾರ್ಚ್ 2017 | 1,000 | – |
| | **ಒಟ್ಟು** | **1,55,255** | **460** |

**2017–18ನೇ ಸಾಲಿಗೆ**

| ಕ್ರ. ಸಂ. | ತಿಂಗಳು | ಸ್ವೀಕೃತಿ | ವೆಚ್ಚ |
|---|---|---|---|
| 7. | ಏಪ್ರಿಲ್ 2017 | 1,600 | – |
| 8. | ಮೇ 2017 | 14,89,270 | – |
| 9. | ಜೂನ್ 2017 | 12,27,002 | 43,379 |
| 10. | ಜುಲೈ 2017 | 1,51,980 | – |
| 11. | ಆಗಸ್ಟ್ 2017 | 62,200 | 3,482 |
| 12. | ಸೆಪ್ಟಂಬರ್ 2017 | 16,100 | 3,332 |
| 13. | ಅಕ್ಟೋಬರ್ 2017 | 4,900 | – |
| 14. | ನವಂಬರ್ 2017 | 9,200 | 7,764 |
| 15. | ಡಿಸೆಂಬರ್ 2017 | 77,100 | – |
| 16. | ಜನವರಿ 2018 | 11,85,100 | – |
| 17. | ಫೆಬ್ರವರಿ 2018 | – | 43,01,048 (ನಿಶ್ಚಿತ ಠೇವಣಿ) |
| 18. | ಮಾರ್ಚ್ 2018 | 3,27,900 | – |
| | **ಒಟ್ಟು** | **45,52,352** | **43,59,005** |

ಸಹಿ/–

**ಸದಸ್ಯ–ಕಾರ್ಯದರ್ಶಿಗಳು,**

ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರ ಹಾಗೂ
ಮಹಾನಗರ ಯೋಜಕರು, ಬೆಂ.ಮ.ಪ್ರ.ಪ್ರಾ, ಬೆಂಗಳೂರು.

# GREATER BENGALURU-BIDADI SMART CITY PLANNING AUTHORITY

# ANNUAL REPORT FOR THE YEARS 2016-17 AND 2017-18

(From 21.10.2016 to 31.03.2018)

**GREATER BENGALURU-BIDADI SMART CITY PLANNING AUTHORITY**
**BANGALORE METROPOLITAN REGION**
**DEVELOPMENT AUTHORITY PREMISES**
No.1, Ali Askar Road, Bangalore-560 052.
E-mail: gbbscpa.tp2018@gmail.com | Website: www.gbbscp.com

## 1. Introduction:

Greater Bengaluru-Bidadi Smart City Planning Authority is an independent organization working under the administrative control of the state Government in the premises of Bangalore Metropolitan Region Developemnt Authority (BMRDA), No.1, Ali Askar Road, Bangalore-560 052. The head of the Planning Authority is Chairman who is appointed by the State Government. Metropolitan Planner, BMRDA is the Member Secretary, working as the Chief Executive Officer looking after all the activities of the Planning Authority.


## 2. Commencement of 'Greater Bengaluru-Bidadi Smart City' Planning Authority:

Greater Bengaluru-Bidadi Smart City Local Planning Area is a Planning Authority among the 10 Planning Authorities in the jurisdiction of Bangalore Metropolitan Area. This Planning Authority is coming under APZ-1 as per the Structure Plan earlier approved by the Government and the developments of the APZ-1 were being controlled as per BMRDA Act. Later the proposal placed before the Government to declare the area coming under APZ-1 as Greater Bengaluru-Bidadi Smart City Local Planning Area as per the Approved Structure Plan. As per Notification No.NaAE 104 BMR 2014, dated 03.06.2016, the Government has declared the Greater Bengaluru-Bidadi Smart City Local Planning Area under Section 4(a)(1) of the Karnataka Town & Country Planning Act, 1961. As per Notification No.NaAE 104 BMR 2014, dated 21.10.2016, the Government has constituted the Greater Bengaluru-Bidadi Smart City Planning Authority as per Section 4(c)(1) of the Act.

Government has appointed the Chairman under Section 4(c)(3)(i) of the Karnataka Town & Country Planning Act, 1961, the Member Secretary under Section 4(c)(3)(ii) Vide Notification No.NaAYe: 104: BMR 2014, Dated 21.10.2016, and the Ex-officio Member under Section 4(c)(3) of the KTCP Act vide Notification No.NaAYe: 200 BMR 2016, Dated 07.02.2017, a Special Invitee for counseling and assistance vide Notification No.NaAYe: 200 BMR 2016, Dated 07.02.2017 under Section 4(f) of the KTCP Act, 1961.

| | | |
|---|---|---|
| 1. | Metropolitan Commissioner, BMRDA | Chairman |
| 2. | Metropolitan Planner, BMRDA | Member Secretary |
| 3. | Jurisdictional Deputy Commissioner of Ramanagara Local Planning Area District | Member |
| 4. | Jurisdictional Chief Executive Officer, Zilla Panchayath of Ramanagara Local Planning Area | Member |
| 5. | Jurisdictional Planning Director, District Urban Development Cell of Ramanagara Local Planning Area | Member |
| 6. | Jurisdictional Chief Executive Officer, KIADB of Local Planning Area | Special Invitee |
| 7. | Jurisdictional Executive Engineer, Urban Water Supply Board of Local Planning Area | Special Invitee |
| 8. | Jurisdictional Executive Engineer of Public Works, Ports & Inland water Transport, Ramanagara local planning Area | Special Invitee |

## Jurisdiction Plan of Planning Authority




## 3. Brief report of Greater Bengaluru-Bidadi Smart City Local Planning Area:

Greater Bengaluru-Bidadi Smart City Local Planning Area is within the jurisdiction of Ramanagara District. Magadi Planning Authority and Bangalore-Mysore Infrastructure Corridor Area Planning Authority jurisdiction falls on the northern side of this Planning Authority. Kanakapura Planning Authority falls on the southern side of this Planning Authority. Kanakapura Planning Authority and Bangalore-Mysore Infrastructure Corridor Area Planning Authority jurisdiction falls on the eastern side of this Planning Authority. Ramanagara Urban Development Authority and Satellite Town Ring Road Planning Authority jurisdiction falls on the western side of this Planning Authority. Mainly, National Highway-275 passes through Greater Bengaluru-Bidadi Smart City Local Planning Area.

Greater Bengaluru-Bidadi Smart City Local Planning Area is consisting of 01 Town Municipality and 26 villages of Bidadi Hobli, 03 villages of Kailancha Hobli, 08 villages of Ramanagara-Kasaba Hobli of Ramanagara Taluk, Ramanagara District, part area of Vaderahalli village of Harohalli Hobli, Kanakapura Taluk, Ramanagara District, totally 38 villages. Extent of these 38 villages is 141.54 sq.kms with a population of 54,770, as per 2011 sensus.

**4. Activities of Greater Bengaluru-Bidadi Smart City Planning Authority:**

Greater Bengaluru-Bidadi Smart City Local Planning Area intends orderly development and control in development of land uses under the Karnataka Town & Country Planning Act, 1961. It has the following duties under the Karnataka Town & Country Planning Act, 1961.

i. Preparation of existing land use plans including base maps of Local Planning Area as per the provisions of Section (5) of Karnataka Town & Country Planning Act, 1961.

ii. Preparation of Master Plan of the Local Planning Area as per the provisions of Section (5) to (8) of Karnataka Town & Country Planning Act, 1961and obtaining approval of the Government.

iii. According permission for layout/building/development, change of landuse, conversion opinion, bifurcation & sub-division of sites as per the provisions of approved Master Plan & Zonal Regulations under Section (14) to (18) of Karnataka Town & Country Planning Act, 1961.

iv. Preparation of plans of development reforms (Layouts) for the villages and towns, other development plans coming within the jurisdiction of the authority.

v. Preparation and implementation of Town Planning Schemes in connection with implementing the Master Plan of Local Planning Area as per the provisions of Section (26) to (68) of Karnataka Town & Country Planning Act, 1961.

vi. Maintenance of funds of the Planning Authority, Budget, Accounts & Audit, preparation of Annual Report as per the provisions of Karnataka Town & Country Planning Act, 1961.

vii. Taking up lake development works and other development activities out of the funds available in the Planning Authority.

viii. Following up of the works entrusted by the Government or taking necessary action to complete the works of the Planning Authority.

**5. Office functioning and management:**

The Greater Bengaluru-Bidadi Smart City Planning Authority functions as per the provisions of the KTCP Act 1961. As per the provisions of the Act, the Authority gives technical opinion for the conversion of agricultural lands, accords approval for development of layouts and Development Plans and issue of Commencement Certificate for construction of buildings. Steps are also being taken to control unauthorized developments.

## 6. Duties and responsibilities of the Authority:

| Sl. No. | Designation | Duties |
|---|---|---|
| 1. | Chairman | 1. To conduct and preside over the meetings of the Authority as per the Karnataka Town & Country Planning Act, 1961 and as per the Karnataka Planning Authority Rules, 1965.<br>2. Under Section 12(2), 12(3) and 12(4) of the Karnataka Planning Authority Rules, 1965, he shall have the following powers,-<br>**Under Rule-12(2):**<br>He shall preserve the order thereat the meetings and shall have all powers necessary for the purpose of preserving such orders.<br>**Under Rule-12(3):**<br>He may direct any member whose conduct is, in his opinion, grossly disorderly to withdraw immediately from the meeting and any member so directed to withdraw shall do so forthwith and shall absent himself during the remainder of the meeting.<br>**Under Rule-12(4):**<br>In case of grave disorder arising in a meeting, the Chairman may, if he thinks necessary to do so, adjourn the meeting to a date to be specified by him. |
| 2. | Member Secretary | To function as per the provisions of the Karnataka Town & Country Planning Act, 1961, the Karnataka Planning Authority Rules, 1965 and orders of the Government. |
| 3. | Members | To participate and offer suggestions and make decisions during the meetings. |

## 7. Criteria adopted for decision making, control and responsibilities:

The applications and proposals received by the Authority are reviewed by the Member Secretary as per the rules and regulations and approvals are accorded. Subjects that are required to be placed in the authority meeting for discussions and actions are taken as per the decision of the meeting. Seven Athority Meetings were held from 21.10.2016 to 31.03.2018 and actions are being taken as per the decision of the meeting.

## 8. Criteria adopted for discharge of duties:

The functions of the authority are discharged as per the provisions of various Acts, Government Orders and circulars and the decisions of the Authority meetings.

**9. Rules / Acts followed in the Authority:**

1. Karnataka Town & Country Planning Act, 1961.
2. Karnataka Planning Authority Rules, 1965.
3. Bangalore Metropolitan Region Development Act, 1985.
4. Karnataka Municipalities Act, 1964.
5. Karnataka Civil Service Rules, 1957.
6. National Highways Act, 1956.
7. Karnataka State Highways Rules, 1965.
8. SAP-BUB-APZ-1 Draft Interim Master Plan Report and Zonal Regulations.

**10. Documents available in the Authority:-**

1. SAP-BUB-APZ-1 Draft Interim Master Plan Report and Zonal Regulations.
2. Approved layout plans.
3. Files pertaining to opinion furnished to Revenue Department in regard to conversion of land.
4. Files pertaining to issue of commencement certificate for building construction
5. Budget and Cash Book
6. Stock Register
7. Files related to administration
8. Parks and CA register
9. Other miscellaneous files

**11. Furnishing of information under Right to Information Act- 2005:-**

| | | |
|---|---|---|
| 1. | First Appellate Authority | Member Secretary |
| 2. | The Public information Officer | Deputy Director of Town & Country Planning, |

A total of 7 RTI applications were received and all these applications have been disposed by the authority.

**12. Facilities provided for public information:-**

a. Facilities are provided for General Public to obtain the information from Greater Bengaluru-Bidadi Smart City Planning Authority. The important information, notifications and publications of Greater Bengaluru-Bidadi Smart City Planning Authority are regulalry displayed on the notice board of office for the general information of the public. Citizen Charter published.

b. Website:- The information in respect of functions and activities of Greater Bengaluru-Bidadi Smart City Planning Authority are available on the Website: www.gbbscpa.in. The information about SAP-BUB-APZ-1 Draft Interim Master Plan Report, Zonal Regulations and the layouts approved by the Authority is also available on the authority's website.

**13. Activities of the Authority - 2017-18:-**

i. **Conversion of land:-** The proposals are being received from Deputy Commissioner, Ramanagara district in regard of furnishing of technical opinion for the purpose of conversion of land. Technical opinion is furnished on the basis of the approved SAP-BUB-APZ-1 Draft Interim Master Plan Report and Zonal Regulations. The Authority received 45 proposals for technical opinion for conversion of land from agriculture to non-agriculture use from the respective Deputy Commissioner and out of these, 31 technical opinions were furnished, documents are sought in 1 case and 13 remaining cases were recommended for rejecting the conversion of land.

**ii. Approval of Layouts:-**

1) Procedure followed in the cases of approved layouts prior to 10.09.2015:- The applicants submit applications for approval of layout and release of sites. The proposal with all the documents and layout drawing prepared as per the zoning regulations is techincally scrutinised and the subject is placed before the authority meeting for approval. As per provisions of Section 17 of the Karnataka Town & Country Planning Act 1961 approval is accorded to the layout. For layout above 10 acres, 40% sites are released after obtaining the NOC from Karnataka State Pollution Control Board.

The applicant submits an application for release of 30% sites in the second instance after completing the development works like construction of roads, CD works and underground drainage works. The authority ensures that the development works are completed by inspecting the the layout and accords approval for the release of 30% sites in the second instance.

The applicant submits an application to the authority for the release of the final 30% of sites after completing all the development works namely roads, park development, underground drainage and STP, water supply and electrical works in the layout. The authority inspects the layout to ensure that all the development works are completed. The certificates obtained from various departments namely, KSPCB, BESCOM, PWD, Horticulture and local auhtority certifying the completion of works is obtained and reviewed by the Authority and the subject is placed in the authority meeting for approval and the final 30% sites are released.

2) Procedure followed in the cases of approved layouts subsequent to 10.09.2015:- As per the provisions of KTCP Act 1961 section 17 and order No. ಸಂವ್ಯಶಾಇ 24 ಶಾಸನ 2015 dated: 10.09.2015 the applicant submits the application for layout approval along with the documents like conversion order issued by Deputy Commisisioner, ownership documents, certified survey sketch etc. The subject is placed in the authority meeting for approval and for the purposes of development of layout, a draft approval for the layout is accorded.

The applicant / developer after completion of all the development works, obtains the completion certificates from concerned agencies namely, KSPCB, BESCOM, PWD, Horticulture and local auhtority, submits application to the authority for release of 100% sites. After ensuring that all the

development works are completed, the subject is placed in the authority meeting and based on the decision of the authority meeting, the Applicant/developer relinquishes the parks and roads to the local authority and civic amenity sites to the planning authority. After this, the final approval is accorded to the layout and 100% sites are released.

iii. Issue of Commencement certificate for construction of buildings:-

Commencement certificates for construction of buildings within the jurisdiction of Greater Bengaluru-Bidadi Smart City Planning Authority is being given as per the provisions of Sec (15) of the Karnataka Town & Country Planning Act 1961 and approved Zoning Regulations. A total of 25 applica-tions were received this year out of which 12 applications have been issued commencement certificate, documents have been called in 08 applications, and remaining 05 applications were recommended for rejecting.

14. The Financial status of theAuthority:

A total of Rs. 47,07,607.00 has been accrued from different fees for the year 2016-17 and 2017-18. The authority has kept fixed deposits in nationalised bank.

15. The Action Plan / activities of the Authority for the year 2018-19

1) Preparation of Master Plan for Greater Bengaluru-Bidadi Smart City Planning Authority;

i) In the Agenda Item No.15.5 of the proceedings of the 15th meeting of BMRDA held on 29.12.2015 under the chairmanship of the Hon'ble Chief Minister, it was resolved to develop the Proposed Bidadi Integrated Township Project through "Development Plan-Town Planning Schemes" mechanism under Karnataka Town & Country Planning Act, 1961.

ii) Accordingly, the Greater Bengaluru – Bidadi Smart City Local Planning Area consisting of Bidadi and 38 surrounding villages has been declared vide Notification bearing No. Na.Aa.E/104/BMR/2014, Dated: 03.06.2016 under Section 4(a)(1) of the Karnataka Town and Country Planning Act, 1961 and Greater Bengaluru – Bidadi Smart City Planning Authority has been constituted vide Government Notification No:Na.Aa.E/104/BMR/2014, Dated: 21.10.2016. under Section 4(c)(1) of the KTCP Act, 1961.

iii) The Chairman is the head of the office & is appointed by the State Government. The Government in its Notification No: Na.Aa.E/104/BMR/2014, Dated:21.10.016 has appointed the Metropolitan Commissioner, BMRDA, Bangalore to be the Chairman of the Authority under the provisions of Section 4(c)(3)(i) of the Karnataka Town and Country Planning Act, 1961, and appointed the Metropolitan Planner, BMRDA, Banglore to be the Member Secretary under the provisions of Section 4(c)(3)(ii) of the Karnataka Town and Country Planning Act, 1961.

iv) Notification in 'Kannada Prabha' and the Deccan Herald' newspapers dated 17.11.2016 under Section (10) of the Karnataka Town and Country Planning Act, 1961 and a Notification in

Karnataka State Gazette dated 08.12.2016 has been issued calling for public suggestions in respect of the ‘Intention to Prepare Master Plan’ as per Karnataka Town and Country Planning Act, 1961 giving 60 days time.

2) Allotment of Civic Amenity sites

As per the Government order No: UDD 27 TTP 2016, dated: 24-05-2017 Karnataka Planning Authorities (allotment of civic amenity sites) Rules 2016 has been notified defining the guidelines to be adopted for the allotment of civic amenity sites reserved in the layouts approved by the authority. As per the allotment rules, steps are being taken to allot civic amenity sites for the requirements classified as first and second priority. Publication in daily newspapers has been issued seeking requirements from various Government and Non-Government organisations. The applications received for allotment of civic amenity sites are processed as per allotment rules.

**16. Details of office staff of Greater Bengaluru-Bidadi Smart City Planning Authority:**

Metropolitan Planner of Bangalore Metropolitan Region Developemnt Authority is working as Member Secretary for this Planning Authority. Under Section 4(h) of Karnataka Town & Country Planning Act, 1961, he is the Chief Executive and Technical Officer.

There is no separate staff for the Greater Bengaluru-Bidadi Smart City Planning Authority. The following employees of the technical section of Bangalore Metropolitan Region Developemnt Authority are looking after the duties of the Greater Bengaluru-Bidadi Smart City Planning Authority.

1. Metropolitan Planner.
2. Additional Director, Town & Country Planning.
3. Joint Director, Town & Country Planning.
4. Deputy Director, Town & Country Planning.
5. Assistant Director, Town & Country Planning.
6. Town Planners.

**Details of Chairman and Officers who have held positions in Greater Bengaluru-Bidadi Smart City Planning Authority from 21.10.2016 to 31.03.2018.**

| Sl. No. | Designation | Name of the Officer | Date | |
|---|---|---|---|---|
| | | | From | To |
| 1. | Chairman | Sri B.S. Shekarappa | 21.10.2016 | 31.03.2018 |
| 2. | Member Secretary and Metropolitan Planner | Sri N.K. Thippeswamy | 21.10.2016 | 31.03.2018 |
| 3. | Additional Director (I/c.) of Town and Country Planning | Sri H.V. Sannappaiah | 21.10.2016 | 07.09.2017 |
| 4. | Additional Director of Town and Country Planning | Sri N.V. Dhananjaya Reddy | 08.09.2017 | 31.03.2018 |
| 5. | Joint Director of Town and Country Planning | Sri H.V. Sannappaiah | 21.10.2016 | 31.03.2018 |
| 6. | Deputy Director of Town and Country Planning | Sri N. Thimme Gowda | 21.10.2016 | 31.03.2018 |
| 7. | Assistant Director of Town and Country Planning | Sri M. Shankarappa | 27.09.2017 | 31.03.2018 |
| 8. | Town Planners | Smt. B.N. Shobha | 21.10.2016 | 31.03.2018 |

## 17. Budget for the year 2017-2018:-

Budget for the Greater Bengaluru-Bidadi Smart City Planning Authority for the year 2017-18 could not be prepared as the Planning Authority was constituted on 21.10.2016 under Section 4(c)(1) of Karnataka Town & Country Planning Act, 1961.

Approval for the budget of Greater Bengaluru-Bidadi Smart City Planning Authority for the year 2017-18 has been obtained in the 3rd meeting of the Authority under Section 68(b) of the K.T.C.P. Act, 1961 and Rule 22 of Karnataka Planning Authorities Rules, 1965 and the same has been submitted to Government for approval.

## 18. Collection of tank rejuvenation fees:-

Fees @ Rs.1,00,000/- per acre has been collected towards Rejuvenation of Tanks from private layout owners coming under the jurisdiction of the Authority as per Government Notification No.NaAYe 90 BeMaPra 2010, dated 29.09.2010 and fees @ Rs.25/- per sqm. has been collected vide Government Notification No.NaAYe 36 BeMaPra 2016 (Part), Dated 27.01.2017, under Section 18-A(1) of Karnataka Town & Country Planning Act, 1961. An amount of Rs.24,16,273.90 has been collected in the current year.

**19. Income and Expenditure of the Authority:-**

**The receipts and expenditure details of the Authority for the year 2016-17 (from 21.10.2016 to 31.03.2017) and for the year 2017-18 are as follows:**

| Sl. No. | Months | Receipt | Expenditure |
|---|---|---|---|
| **For the year 2016-17 (From 21.10.2016 to 31.03.2017)** | | | |
| 1. | October-2016 | - | - |
| 2. | November-2016 | - | - |
| 3. | December-2016 | - | - |
| 4. | January-2017 | - | - |
| 5. | February-2017 | 1,54,255 | 460 |
| 6. | March-2017 | 1,000 | - |
| | **Total** | **1,55,255** | **460** |

**For the year 2017-18**

| Sl. No. | Months | Receipt | Expenditure |
|---|---|---|---|
| 7. | April-2017 | 1,600 | - |
| 8. | May-2017 | 14,89,270 | - |
| 9. | June-2017 | 12,27,002 | 43,379 |
| 10. | July-2017 | 1,51,980 | - |
| 11. | August-2017 | 62,200 | 3,482 |
| 12. | September-2017 | 16,100 | 3,332 |
| 13. | October-2017 | 4,900 | - |
| 14. | November-2017 | 9,200 | 7,764 |
| 15. | December-2017 | 77,100 | - |
| 16. | January-2018 | 11,85,100 | - |
| 17. | February-2018 | - | 43,01,048 (Fixed Deposit) |
| 18. | March-2018 | 3,27,900 | - |
| | | **45,52,352** | **43,59,005** |

*Sd/-*

Member Secretary, Greater Bengaluru-Bidadi Smart
City Planning Authority and Metropolitan Planner, BMRDA
Bangalore